ಸಿಸಿ ನಂಃ1234/2022

ಸಿ.ಡಬ್ಲ್ಯೂ-2 /ಪಿ.ಡಬ್ಲ್ಯೂ - 1

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 1234/2022**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕುಮಾರ |
| ತಂದೆಯ ಹೆಸರು | ಃ | ಗುರುಬಸಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಪೆಂಟರ್ |
| ವಾಸ ಸ್ಥಳ | ಃ | ಧಾರವಾಡ |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 21-02-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಅಂದಾಜು 4 ವರ್ಷದ ಹಿಂದೆ ಮದ್ಯಾಹ್ನ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ನನ್ನ ಸಹಿಯನ್ನು ಯಾವಕಾರಣಕ್ಕಾಗಿ ಪಡೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಈಗ ನೋಡುತ್ತಿರು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ.

**ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುನ ಮಾಡಲು ಅನುಮತಿ ನೀಡಲಾಯಿತು.**

සිසි ನಂಃ1234/2022

ಸಿ.ಡಬ್ಲ್ಯೂ-2 /ಪಿ.ಡಬ್ಲ್ಯೂ - 1

**ಪಾಟೀ ಸವಾಲುಃ ಮಾನ್ಯ ಹಿಸಸ ರವರಿಂದ**

ದಿಃ 15-11-2021 ರಂದು ವಿದ್ಯಾಗಿರಿ ಪೊಲೀಸರು ಧಾರವಾಡ ಕಲಘಟಗಿ ರಸ್ತೆಯ ಟೋಲಾನಾಕಾ ಹತ್ತಿರ ನನ್ನನ್ನು ಮತ್ತು ಚಾಸಾ.3 ರವರನ್ನು ದಿಃ11-11-2021 ರಂದು ರಾತ್ರಿ 10.00 ಗಂಟೆಗೆ ಚಾಸಾ.1 ರವರ ಮೇಲೆ ಹಲ್ಲೆಯಾದ ಸ್ಥಳ ಪಂಚನಾಮಗೆ ಪಂಚರಾಗಿ ಕರೆಯಿಸಿದ್ದರು ಎಂದರೆ ಸರಿಯಲ್ಲ. ಪೊಲೀಸರು ನನ್ನ ಮತ್ತು ಚಾಸಾ.3 ರವರ ಸಮಕ್ಷಮ ಧಾರವಾಡ ಕಲಘಟಗಿ ರೋಡ ಟ್ರೇನಿಟೆ ಕಾಂಪ್ಲೇಕ್ಸ ಶೀಲ್ಪಾ ಮೇಡಿಕಲ್ ಸ್ಟೋರ ಎದುರಿಗೆ ರಸ್ತಯಲ್ಲಿ ನಮ್ಮ ಸಮಕ್ಷಮ ಘಟನಾ ಸ್ಥಳ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಘಟನೆ ಮತ್ತು ಪಂಚನಾಮೆಯ ಬಗ್ಗೆ ಎಲ್ಲಾ ವಿಷಯ ಗೊತ್ತಿದ್ದರು ಕೂಡಾ 4 ವರ್ಷ ವಾದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೆಳುತ್ತಿದ್ದೆನೆ ಎದಂರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.